ಹೂಡಿ ಗ್ರಾಮದಲ್ಲಿ ಸಾಧಾರಣ ನೂರು ಎಕರೆ ಭೂಮಿಯನ್ನು ಮುಂಚಿತವಾಗಿ ಅಲ್ಲಿ ಇದ್ದ ಪರಿಶಿಷ್ಟ ಜಾತಿ ಜನಾಂಗದವರು ಸಾಗುವಳಿ ಮಾಡುತ್ತಿದ್ದರು. ಹರಿಜನ-ಗಿರಿಜನರು ಈ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರು, ನ್ಯಾಯ ಬದ್ಧವಾಗಿ, ಬಗರ್‌ಹುಕುಂ ಸಾಗುವಳಿ ಕಾಯ್ದೆ ಪ್ರಕಾರ ಆ ಜಮೀನು ಆ ಬಡ ಹರಿಜನರಿಗೆ ಗಿರಿಜನರಿಗೆ ಹೋಗಬೇಕಾಗಿತ್ತು. ಆದರೆ ಬಗರ್‌ಹುಕುಂ ಸಾಗುವಳಿ ಕಾಯ್ದೆಯಲ್ಲಿ ಒಂದು ಪ್ರಾವಿಷನ್ ಮಾಡಿದ್ದಾರೆ. ಏನು ಪ್ರಾವಿಷನ್ ಮಾಡಿದ್ದಾರೆಂದರೆ, ಸಿಟಿ ಲಿಮಿಟ್ಸ್‌ನಿಂದ ಹತ್ತನೆಯ ಕಿಲೋಮೀಟರ್ ಒಳಗಾಗಿ ಆ ಭೂಮಿ ಇದ್ದರೆ ಅದನ್ನು ಕೊಡುವುದಕ್ಕೆ ಬರುವುದಿಲ್ಲ. ಇದು ವಿಲೇಜ್ ಲಿಮಿಟ್ಸ್‌ಗೆ ಸಂಬಂಧಪಟ್ಟಿಲ್ಲ. ಹುಬ್ಬಳ್ಳಿ ಇರಬಹುದು, ಬೆಳಗಾಂ ಇರಬಹುದು, ಬೆಂಗಳೂರು ಇರಬಹುದು, ಹಾಗಾಗಿ ಮಾನ್ಯ ಸಚಿವ ಕೃಷ್ಣಪ್ಪನವರು ಏನು ಮಾಡಿದರು ಎಂದರೆ ತನ್ನ ದುರಾಸೆಯಿಂದ ಈ ಭೂಮಿ ತನ್ನ ಆಪ್ತರಿಗೆ, ಸ್ನೇಹಿತರಿಗೆ ಕೊಡಬೇಕು, ಸಾಕಷ್ಟು ಹಣ ಮಾಡಬೇಕು, ಎಂದು ಆ ಪರಿಶಿಷ್ಟ ಜಾತಿ ಜನಾಂಗದವರನ್ನು ಅಲ್ಲಿಂದ ಎವಿಕ್ಟ್ ಮಾಡಿಸಿದರು. ರೆವಿನ್ಯೂ ಮಿನಿಸ್ಟರ್ ಅವರೂ ಕೂಡ ಅಲ್ಲಿ ವಿಸಿಟ್ ಕೊಟ್ಟಿದ್ದಾರೆ. ರೆವಿನ್ಯೂ ಮಿನಿಸ್ಟರ್‌ಗೆ ಎಲ್ಲಾ ಸತ್ಯಸಂಗತಿ ಗೊತ್ತಿದೆ. ಆದರೆ ಅವರು ಏತಕ್ಕೆ ಬಾಯಿ ಮುಚ್ಚಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ನಾನು ಎರಡು ಮೂರು ಸಾರಿ ಇಲ್ಲಿ ಈ ವಿಚಾರವನ್ನು ರೈಸ್ ಮಾಡಿದ್ದೇನೆ. ಸಾಮಾನ್ಯ ಜನ, ಬಡಜನರು, ಕಡು-ಬಡವರು, ಪರಿಶಿಷ್ಟ ಜಾತಿ ಜನಾಂಗ ತಮಗೆ ಹೇಳಿದರು, ಮನವಿ ಕೊಟ್ಟರು, ಅದನ್ನು ಓದುವುದಕ್ಕೆ ತಮಗೆ ಆಗಲಿಲ್ಲವೋ? ನಿಮಗೆ ಕಣ್ಣಿರಲಿಲ್ಲವೋ? ಅಥವಾ ಕೇಳಲಿಕ್ಕೆ ಆಗಲಿಲ್ಲವೋ ನಿಮಗೆ ಕಿವಿ ಇರಲಿಲ್ಲವೋ? ಅಥವಾ ಅಲ್ಲಿ ದುರ್ವ್ಯವಹಾರ ನಡೆದಿದೆ ಎಂದು ಗೊತ್ತಾಗಿ ತಾವು ಸುಮ್ಮನೆ ಕುಳಿತಿರುವುದು ನೋಡಿದರೆ ತಾವು ಶಾಮೀಲು ಇದ್ದೀರೋ? ಈ ರೀತಿಯ ಆಪಾದನೆಗಳನ್ನು ಮಾಡಿದರೂ ಸಹಿತ ಇನ್ನೂ ರೆವಿನ್ಯೂ ಮಿನಿಸ್ಟರ್ ರವರು ಸುಮ್ಮನೆ ಕುಳಿತಿದ್ದಾರೆ. ಅದರ ನಂತರ ಏನಾಯಿತು? ಈ ಆಶ್ರಯ ಸಮಿತಿಯ ಛೇರ್ಮನ್‌ರು ಕೃಷ್ಣಪ್ಪನವರು ಇದ್ದರು. ಆಶ್ರಯದಲ್ಲಿ ಯಾರಿಗೆ ಸೈಟನ್ನು ಕೊಡಬಹುದು ಎನ್ನುವುದಕ್ಕೆ ಕ್ರೈಟೇರಿಯಾ ಏನಿದೆ? ಮೊದಲನೆಯದು ಅವರು ಸೈಟ್‌ಲೆಸ್ ಇರಬೇಕು, ಎರಡನೆಯದು ಸ್ಥಳೀಯ ಜನರಿಗೆ ಪ್ರೈಯಾರಿಟಿ ಕೊಡಬೇಕು, ಮೂರನೆಯದು ಅವರ ಆದಾಯ ವಾರ್ಷಿಕ ಎಂಟು ಸಾವಿರದನಾಲ್ಕು ನೂರು ರೂಪಾಯಿಗಳ ಒಳಗಾಗಿ ಇರಬೇಕು. ಈ ಮೂರನ್ನು ನೋಡದೆ, ಇದಕ್ಕೆ ಯಾವ ರೀತಿಯ ಗಮನವನ್ನೂ ಕೊಡದೆ ಏನು ಮಾಡಿದರು ಎಂದರೆ 1315 ಸೈಟುಗಳನ್ನು ಇವರು ಹಂಚಿದರು. ನಾನು ಬಹಳ ಸಾರಿ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತಂದೆ. ನೀವು ಸ್ವಚ್ಛ ಸರ್ಕಾರ ಕೊಡುತ್ತೇವೆ ಎಂದು ಹೇಳಿದಿರಿ, ಧಕ್ಷ ಸರ್ಕಾರ ಕೊಡುತ್ತೇವೆ ಎಂದು ಹೇಳಿದಿರಿ. ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದಿರಿ. ಆದರೆ ನೀವು ಇಲ್ಲಿ ಏನು ಮಾಡುತ್ತಿದ್ದೀರಿ ಎಂದು ಕೇಳಿವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ಇಲ್ಲ, ಇಲ್ಲಿ ಯಾವ ತರಹದ ದುರ್ವ್ಯವಹಾರ ಆಗಿಲ್ಲ. ಅವರು ಕಣ್ಣಿಲ್ಲ, ಡೆಫ್ ಡಮ್ ಇಂಥವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ಪವಿತ್ರವಾದ ಕೆಲಸವನ್ನು ಮಾಡಿದ್ದಾರೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಪರಿಶಿಷ್ಟ ಜಾತಿ ಜನಾಂಗ, ಹಿಂದುಳಿದ ಜನಾಂಗ, ಬಡ ಜನರು ನಮ್ಮ ಪಕ್ಷದ ಅಧ್ಯಕ್ಷರಾದ ಅಶ್ವತ್ಥನಾರಾಯಣರೆಡ್ಡಿಯವರ ನೇತೃತ್ವದಲ್ಲಿ ಕಳೆದ ಮೂರು ತಿಂಗಳಿಂದ ಅಜಿಟೇಷನ್ ಮಾಡುತ್ತಿದ್ದಾರೆ. ಈ ಜನರ ಹೊಡೆಬಡೆ ಆಗಿದೆ. ಮಾನ್ಯ ಕೃಷ್ಣಪ್ಪನವರ ನೇತೃತ್ವದಲ್ಲಿ ಕೆಂಪಯ್ಯ ಡಿಸಿಪಿ, ಡೆಪ್ಯುಟಿ ಕಮಿಷನರ್ ರೂರಲ್ ಹಾಲಪ್ಪನವರು ಇವರು ಇವರ ಕೈಗೊಂಬೆಯಾಗಿದ್ದಾರೆ. ಕೃಷ್ಣಪ್ಪನವರು ಹೇಳಬೇಕು, ಆ ಪ್ರಕಾರ ಅವರು ಕುಣಿಯಬೇಕು. ಅಲ್ಲಿ ಹೋಗಿ ಅಲ್ಲಿದ್ದ ಬಡಜನರಿಗೆ ಹೊಡೆಬಡೆ ಮಾಡಿದ್ದಾರೆ. ಲಾಟಿಛಾರ್ಜ್ ಮಾಡಿದ್ದಾರೆ. ಅವರು ಗುಡಿಸಲು ಕಟ್ಟಿಕೊಂಡಿದ್ದರು, ಅದೆಲ್ಲಾ ಡ್ಯಾಮೇಜ್ ಮಾಡಿದ್ದಾರೆ. ಇದು ಒಂದು ಕಡೆಯಾದರೆ, ಪುನಃ ನಮಗೆ ಅನ್ಯಾಯ ಮಾಡಿದ್ದಾರೆ ಎಂದು ಪೋಲೀಸ್ ಸ್ಟೇಷನ್ ಮುಂದೆ ಮೊನ್ನೆ ಮೊನ್ನೆ ನಾಲ್ಕಾರು ದಿವಸದ ಹಿಂದೆ ಹೇಳಿದಾಗ ಆಗಲೂ ಸಹಾ ಪೋಲೀಸ್‌ನವರು ಲಾಠಿಛಾರ್ಜ್ ಮಾಡಿದರು.